**ಓ.ಎಸ್.ನಂ. 697/2019**

**ಪಿ.ಡಬ್ಲ್ಯು:**

ದಿನಾಂಕಃ 10-11-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಜಿ ಹೆಚ್ ಕೆ ಪ್ರತಿವಾದಿ ಪರ ವಕೀಲರಿಂದಃ-**

ನನ್ನ ತಂದೆ ನವೆಂಬರ್ 2021 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ತಂದೆ ಮೊದಲು ಕಲ್ಲೇಶಪ್ಪ ಮತ್ತು ನಮ್ಮಗಳ ವಿರುದ್ದ ಈ ದಾವೆ ಸಲ್ಲಿಸಿದ್ದರು ಎಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ನಾನು 3 ನೇ ಪ್ರತಿವಾದಿಯಿಂದ ವಾದಿಯಾಗಿ ವರ್ಗಾವಣೆ ಗೊಂಡಿದ್ದೇನೆ ಎಂದರೆ ಸರಿ. ಐಟಂ ನಂ. 3 ರಲ್ಲಿ ರಾಗಿ ಬೆಳೆ ಬೆಳೆಯುತ್ತಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ತೆಂಗಿನ ತೋಟ ಮದ್ಯದಲ್ಲಿ ರಾಗಿ ಬೆಳೆ ಬೆಳೆಯುತ್ತಾರೆ ಎಂದು ನುಡಿಯುತ್ತಾರೆ. ಕಲ್ಲೇಶಪ್ಪ ನನ್ನ ವಿರುದ್ದ ಸಿಂಗಟಗೆರೆ ಠಾಣೆಯಲ್ಲಿ ದೂರನ್ನು ನೀಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಗೆ ರಾಗಿ ಬೆಳೆಯ ದುಡ್ಡು ಬಂದಿತ್ತು ಅದನ್ನು ನಾನು ಎ ಟಿ ಎಂ ಮುಖಾಂತರ ಪಡೆದುಕೊಂಡಿದ್ದೇನೆಂದು 1 ನೇ ಪ್ರತಿವಾದಿ ಕಲ್ಲೇಶಪ್ಪ ಮತ್ತು ರಾಜಪ್ಪ ದೂರು ನೀಡಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಕಲ್ಲೇಶಪ್ಪ ಉಳಿಮೆ ಮತ್ತು ಅಭಿವೃದ್ದಿ ಮಾಡುತ್ತಿದ್ದಾರೆ ಎಂಬ ಪ್ರಶ್ನೆಗೆ ಕೇವಲ ಉಳುಮೆ ಮಾಡುತ್ತಿದ್ದಾರೆಂದು ನುಡಿಯುತ್ತಾರೆ. ನನ್ನ ತಂದೆ ದಾವಾ ಸ್ವತ್ತಿನಲ್ಲಿ ಉಳುಮೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಇತ್ತೀಚೆಗೆ ಮಾತ್ರ ಉಳುಮೆ ಮಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯು 10 ವರ್ಷದಿಂದ ಉಳುಮೆ ಮಾಡುತ್ತಿದ್ದಾರೆ.

1 ನೇ ಪ್ರತಿವಾದಿ ಪಂಚನಹಳ್ಳಿಯ ಎ ಪಿ ಎಂ ಸಿ ಗೆ 21 ಕ್ವಿಂಟಾಲ್ ತಂದೆಯ ಹೆಸರಿನಲ್ಲ ಮಾರಾಟಕ್ಕೆ ಬಿಟ್ಟಿದ್ದ ಬಗ್ಗೆ ನನಗೆ ತಿಳಿದಿರುವುದಿಲ್ಲ. ಸದರಿ 21 ಕ್ವಿಂಟಾಲ್ ನ ಮೊತ್ತ 70 ಸಾವಿರ ಇದ್ದ ಬಗ್ಗೆ ನನಗೆ ತಿಳಿದಿರುವುದಿಲ್ಲ. ನನ್ನತಂದೆಯ ಎಟಿಎಂ ಕಾರ್ಡ್ ಉಪಯೋಗಿಸಿ ನಾನು 1 ಲಕ್ಷದ 10 ಸಾವಿರ ಡ್ರಾ ಮಾಡಿಕೊಂಡದ್ದೇನೆಂದರೆ ಸರಿಯಲ್ಲ. ದಿಃ 16-06-2021 ರಲ್ಲಿ 20 ಸಾವಿರ, 17-06-2021 ರಲ್ಲಿ 1 ಲಕ್ಷದ 10 ಸಾವಿರ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. 2000 ದಿಂದ 2012 ರ ವರೆಗೆ ಸಿಂಗಟಗೆರೆ ಹೋಬಳಿ ಮತ್ತು ಹಲವಾರು ತಾಲೂಕುಗಳನ್ನು ಸರ್ಕಾರ ಬರಪೀಡಿತ ತಾಲೂಕುಗಳು ಎಂದು ಘೋಷಣೆ ಮಾಡಿದ ಬಗ್ಗೆ ನನಗೆ ತಿಳಿದಿರುವುದಿಲ್ಲ. 1 ನೇ ಪ್ರತಿವಾದಿ ದಾವಾ ಸ್ವತ್ತಿನಲ್ಲಿ 6 ಬೋರುಗಳನ್ನು ಕೊರೆಸಿದ ಬಗ್ಗೆ ನನಗೆ ತಿಳಿದಿರುವುದಿಲ್ಲ. 2 ಬೋರಿನಲ್ಲಿ ಮಾತ್ರ ನೀರು ಬಂದಿದ್ದು ಅದಕ್ಕೆ ಕಲ್ಲೇಶಪ್ಪರವರು 2 ಲಕ್ಷ ಮತ್ತು ಜಮೀನಿನ ಅಭಿವೃದ್ದಿಗೆ 2 ಲಕ್ಷ ಖರ್ಚು ಮಾಡಿದ್ದಾರೆ ಎಂಬ ಬಗ್ಗೆ ನನಗೆ ತಿಳಿದಿರುವುದಿಲ್ಲ.

ಸಾಕ್ಷಿಯು ಮುಂದುವರೆದು ನನ್ನ ತಂದೆ ಇದ್ದಾಗಲೇ ಬೋರ್ ತೆಗೆಸಿದ್ದರು ಮತ್ತು ತಂತಿ ಬೇಲಿ ಹಾಕಿಸಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ಮತ್ತು 1 ನೇ ಪ್ರತಿವಾದಿ ಸಿಂಗಟಗೆರೆಯ ಸಿಡಿಸಿಸಿ ಬ್ಯಾಂಕ್ ನಲ್ಲಿ 80 ಸಾವಿರ ಸಾಲ ಪಡೆದಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಕಲ್ಲೇಶಪ್ಪ ಮಾತ್ರ ಸಾಲ ಪಡೆದಿದ್ದಾರೆಂದು ನುಡಿಯುತ್ತಾರೆ. ದಾವಾ ಸ್ವತ್ತು ನನ್ನ ತಂದೆಗೆ ಸಂಬಂಧಿಸಿದ್ದು. ಖಾತೆ ಇದ್ದವರಿಗೆ ಮಾತ್ರ ಸಾಲ ನೀಡಲಾಗುತ್ತದೆ ಎಂಬ ಪ್ರಶ್ನೆಗೆಸಾಕ್ಷಿಯು ನನ್ನ ತಂದೆಯನ್ನು ಕರೆದುಕೊಂಡು ಹೋಗಿ ಸಾಲ ಪಡೆದಿದ್ದಾರೆ ಎಂದು ನುಡಿಯುತ್ತಾರೆ.

ನನ್ನ ಮದುವೆ 2001 ರಲ್ಲಿ ಆಯಿತು. ನನ್ನ ಮದುವೆಗೆ ನನ್ನ ತಂದೆ ಮತ್ತು 1 ನೇ ಪ್ರತಿವಾದಿ ರೂ. 4 ಲಕ್ಷ ಖರ್ಚು ಮಾಡಿ ಮದುವೆ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಮದುವೆಗೆ ಸಾಲ ಮಾಡಿ 1 ನೇ ಪ್ರತಿವಾದಿ ಸಾಲಗಾರರಾಗಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಅಕ್ಕ ಬಾವ ಮುಂದು ನಿಂತು ಖರ್ಚು ಮಾಡಿ ಮದುವೆ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಅಕ್ಕ ಶಿಕ್ಷಕಿ. ನನ್ನ ಅಕ್ಕನ ಟಿ ಸಿ ಹೆಚ್ ವಿಧ್ಯಾಭ್ಯಾಸಕ್ಕೆ ಸಾಲ ಮಾಡಲಾಗಿತ್ತು ಎಂದರೆ ಸರಿಯಲ್ಲ. ನನ್ನ ಅಕ್ಕ ಬಾವನ ಮದುವೆ 2000 ದಲ್ಲಿ ಆಗಿರಬಹುದು. ಸದರಿ ಮದುವೆಗೆ ನನ್ನ ತಂದೆ ಮತ್ತು 1 ನೇ ಪ್ರತಿವಾದಿ 2 ಲಕ್ಷ ಖರ್ಚುಮಾಡಿ ಈಗ 1 ನೇ ಪ್ರತಿವಾದಿ ಸಾಲಗಾರರಾಗಿದ್ದಾರೆ ಎಂದರೆ ಸರಿಯಲ್ಲ.

ದಿಃ 14-08-2017 ರಂದು 1 ನೇ ಪ್ರತಿವಾದಿ ಕಲ್ಲೇಶಪ್ಪ ಮತ್ತು ನನ್ನ ತಂದೆ ಜಗದೀಶ್ ರವರಿಂದ 1 ಲಕ್ಷದ 80 ಸಾವಿರ ಪ್ರನೋಟ್ ಆಧಾರದಲ್ಲಿ ಸಾಲ ಪಡೆದಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆ 15 ವರ್ಷದಿಂದ ಮನೆಯಲ್ಲಿ ಇರಲಿಲ್ಲ ಅವರು ಹೇಗೆ ಸಾಲ ಪಡೆಯಲು ಆಗುತ್ತದೆ ಎಂದು ನುಡಿಯುತ್ತಾರೆ. ಸದರಿ ಸಾಲ ತೀರುವಳಿ ಆದ ಮೇಲೆ ಮತ್ತೆ ಜಗದೀಶ್ ರವರ ಬಳಿ 2 ಲಕ್ಷ ಪ್ರನೋಟ್ ಆಧಾರದ ಮೇಲೆ ಸಾಲ ಪಡೆದಿದ್ದಾರೆ ಎಂದರೆ ಸರಿಯಲ್ಲ. ಸದರಿ ಸಾಲಕ್ಕೆ ನನ್ನ ತಂದೆ ಮತ್ತು 1 ನೇ ಪ್ರತಿವಾದಿ ಪ್ರನೋಟ್ ಗೆ ಸಹಿ ಮಾಡಿ ಭೂ ಅಭಿವೃದ್ದಿಗಾಗಿ ಸಾಲ ಪಡೆದಿದ್ದಾರೆ ಎಂದರೆ ಸರಿಯಲ್ಲ. ಜಗದೀಶ್ ರವರು ಪ್ರನೋಟ್ ಸಾಲ ತೀರುವಳಿಯಾಗಿಲ್ಲ ಎಂದು ನಮಗೆ ನೋಟೀಸು ನೀಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪೂರ್ಜರಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಂಜುಂಡಪ್ಪರವರು ನಮ್ಮ ಮತ್ತು 1 ಮತ್ತು 2 ನೇ ಪ್ರತಿವಾದಿಗಳಿಗೆ ನೋಟೀಸು ನೀಡಿದ್ದಾರೆ ಎಂದರೆ ಸರಿಯಲ್ಲ. ಮಧುಕುಮಾರ್ ರವರಿಂದ ನನ್ನ ತಂದೆ ಮತ್ತು 1 ನೇ ಪ್ರತಿವಾದಿ 2 ಲಕ್ಷ ಸಾಲ ಪಡೆದಿದ್ದಾರೆ ಎಂದರೆ ಸರಿಯಲ್ಲ.

**<u>ಮುಂದುವರೆದು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ನೀಡಲಾಯಿತು.</u>**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-

**2 ನೇ.ಹೆ.ಪ್ರಃದಃನ್ಯಾಃದಂ.,ರವರು,**

**ಕಡೂರು.**